ಮುಖ, ಕೆನ್ನೆ, ಕಿವಿ, ಕಣ್ಣು, ಹುಬ್ಬು, ಚೆಂದುಟಿ, ಬಾಯಿ, ಎಸಳು, ಮೂಗು, ಹಣೆ, ತಲೆಗೂದಲು, ಹೆದೆಯೇರಿದ ಮನ್ಮಥನ ಬಿಲ್ಲು ಕೊಂಕಿನಂತಹ ಎದೆ ಒಂದೊಂದನ್ನು ನೋಡಿ ನೋಡುತ್ತ ಹಿಗ್ಗಿದಳು! ಕನ್ನಡಿಯನ್ನು ಆಲಂಗಿಸಿಕೊಂಡು ಚುಂಬಿಸುವಂತಾದ ಮನಸ್ಸನ್ನು ಬಿಗಿಹಿಡಿದು ತಡೆದುಕೊಂಡಳು!

ಶ್ರೀಮಂತ ಹೆಣ್ಣಿಗೆ ಇನಿಯನನ್ನು ಜಯಿಸಲು ಚೆಲುವೆಂಬ ಕತ್ತಿಯೊಂದಿರಲು ಬೇರೆ ಚೂಪಾದ ಬಾಣವೇಕೆ? ಚೆಲುವಿಗೆ ಎಲ್ಲೆಡೆಯೂ ಗೆಲುವು! ಹೇಳು, ಸೋಲುಂಟೆ ಹೇಳು? ಚೈತ್ರವಾಹಿನಿಯಾದ ತಾನು ಇಂದು ಆಯುಧವಿಲ್ಲದ ಕದನ ಕಲೆಯಿಂದ ಯತಿವೇಷಿ ಪಾರ್ಥದೇವನನ್ನು ಗೆಲ್ಲುವೆನು ಎಂಬ ಹೆಮ್ಮೆಗೆ ಒಳಗಾದಳು. ತನ್ನನ್ನು ಯಾರೂ ಅನುಸರಿಸಿ ಬರದಂತೆ ಕಟ್ಟಾಜ್ಞೆಯನ್ನು ಮಾಡಿದಳು. ಸೇನಾ ಶಿಬಿರದಿಂದ ಕಾಡಿನ ಗುಡಿಯ ಕಡೆಗೆ ಏಕಾಂಗಿಯಾಗಿ ಹೊರಟಳು.

ಹೊನ್ನಿನ ಕಿರಣದ ಜೇಕೊಳವಿಯಿಂದ ಸಂಜೆ ಜಿರ್ರೆಂದು ಬಣ್ಣವನ್ನೆರಚಿತ್ತು. ಆ ಕೆಂಬಿಸಿಲು ಕಾಡಿನ ಛಾಯಾಂಧತೆಯಲ್ಲಿ ಅಲ್ಲಲ್ಲಿ ಕೋಲು ಕೋಲಾಗಿ ಮರ ಮರಗಳ ಮಧ್ಯೆ ತೂರಿ ಬಂದು ಪ್ರಕಾಶಿಸುತ್ತಿತ್ತು. ಅದು ಆ ಹೊಸ ನೆರಳ ಹುಲ್ಲುಗಾವಲಿನಲ್ಲಿ ಹೊನ್ನೀರ ಮಳೆ ಹೊಯ್ಯಲು ಅಲ್ಲಲ್ಲಿ ನೀರು ಸಣ್ಣ ಸಣ್ಣಗೆ ತಂಗಿ ಮಿರುಗುವಂತೆ ಶೋಭಿಸುತ್ತಿತ್ತು. ಮೃದು ಗಾಳಿಯು ತೀಡುತ್ತ ಮರ ಮರಗಳಲ್ಲಿ ಮರ್ಮರ ಧ್ವನಿ ಮಾಡಿತ್ತು. ಗೂಡು ಸೇರಲು ಹೋಗುವ ಪಿಕಳಾರಿ, ಕಾಮಳ್ಳಿ, ಗಿಳಿಗಳ ಉಲಿತವು ಆ ಕಾಡಿನ ನಿರ್ಜನ ನೀರವದಲ್ಲಿ ಇಂಪಾಗಿ ಕೇಳಿಸುತ್ತಿತ್ತು. ರಾಜಕುಮಾರಿಯು ಬನದಲ್ಲಿ ಅಲ್ಲಲ್ಲಿ ಅಲೆದು ನಿಂತು ಆಲಿಸುತ್ತ, ಮತ್ತೆ ಮುಂದುವರೆಯುತ್ತ ಶುಭವನ್ನು ಹಾರೈಸಿಕೊಂಡು ನಿಡುನೋಟದಲ್ಲಿ ಸಾಗುತ್ತಿದ್ದಳು. ಹಾಗೆ ಒಮ್ಮೆ ಬಳ್ಳಿಯ ಹೊದರನ್ನೆ ಕುಟೀರವೆಂದು ಭಾವಿಸಿ ತಲ್ಲಣಿಸಿ ಮುನ್ನಡೆದಳು. ಅದು ತಪ್ಪೆಂದು ತಿಳಿದು ನಾಚಿದಳು. ಹೀಗೆ ಸವ್ಯಸಾಚಿ ಅರ್ಜುನನನ್ನು ಹುಡುಕುತ್ತಿರಲು ಕತ್ತಲೆಯ ಪ್ರವಾಹ ರಯ್ಯನೊಯ್ಯನೆ ಹರಿದು ಬಂದು ಇಳೆಯನ್ನು ಆವರಿಸಿತು.

ತಕ್ಷಣ ಪೂರ್ವದ ಸಾಕಷ್ಟು ದೂರದಲ್ಲಿ ದಿಗಂತದೆಡೆಯಲ್ಲಿ ಕತ್ತಲೆಯ ಕಾಡಿನಂಚಿಗೆ ಬೆಂಕಿ ಹೊತ್ತಿತೇನೊ ಎನ್ನುವಂತೆ ಹೊನ್ನಿನ ಉರಿ ಹೊಮ್ಮಿ ತಣ್ಣಗೆ ಹಬ್ಬಿತು. ಹುಣ್ಣಿಮೆಯ ಉಣ್ಣೆ ಮುಗಿಲಿನ ಹಾಸು ಹೊಕ್ಕಿನಲ್ಲಿ ಜೊನ್ನಸಿರಿ (ಬೆಳದಿಂಗಳ ಸಂಪತ್ತು) ಹರಿಯಿತು.

ಓಹ್, ನೋಡ ನೋಡುತ್ತಿದ್ದಂತೆ ಕಣ್ಣ ನೋಟಕ್ಕೆ ಅಮೃತ ಕಿರಣನ ಕನಕಮಂಡಲ (ದುಂಡನೆ ಪ್ರಭಾವಲಯ) ಗೋಚರಿಸಿತು. ಅದು ಚಿನ್ನದಲ್ಲಿ ತೇದ ಹಾಲಿನ ಮಳೆಯನ್ನು ದಿಕ್ಕು ದಿಕ್ಕಿಗೆ ಚೆಲ್ಲಿದಂತಿತ್ತು. ಜಗತ್ತು ಬೆಳುದಿಂಗಳ ಸುಧಾ ಸ್ವಪ್ನದಲ್ಲಿ—ತಂಪಾದ ಕಿರಣಗಳ ಚಂದ್ರ ಸಮುದ್ರದ ಅಲೆಗಳ ಮೇಲೆ ತೇಲಿದಂತಿತ್ತು.

ಪ್ರೇಮಕಾತರಳಾದ ಚಿತ್ರಾಂಗದೆಯ ಪೂರ್ಣಚಂದ್ರನಿರುವ ಹುಣ್ಣಿಮೆಯ ದಿನದಂತಹ ಹೃದಯ ನೌಕೆಯು ಹಲವು ಭಾವಗಳಲ್ಲಿ ತೂಗಾಡುತ್ತಿತ್ತು. ಅದು ಒಮ್ಮೆ ಬೆಳದಿಂಗಳಿನ ಹಾಲ್ಗಡಲಿನ ಹೊನ್ನ ಅಲೆಗಳೆಡೆಯಲ್ಲಿ ಆಸೆಯ ನವಿಲಿನಂತೆ ಎತ್ತರದಲ್ಲಿದ್ದರೆ, ಮತ್ತೊಮ್ಮೆ ನಿರಾಶೆಯ ಕಂದರದ ಆಳಕ್ಕೆ ಇಳಿದಂತೆ ಉಯ್ಯಲಾಡುತ್ತಿತ್ತು! ಕಾಮಿನಿ ಚಿತ್ರಾಂಗದೆಯು ಈ ರೀತಿ ಕಿರೀಟಿ ಅರ್ಜುನನನ್ನು ಹುಡುಕುತ್ತ ಅಲೆಯುತ್ತಿದ್ದಳು. ಆಗ ದೂರದಲ್ಲಿ ಮರಗತ್ತಲೆಯ ರಕ್ಕಸಿಯ ಉರಿವ ಕಣ್ಣು ಎನ್ನುವಂತೆ ಒಂದು ಕೆಂಪಾದ ಬೆಂಕಿಯು ಉರಿನಾಲಗೆಯ ನಾಟ್ಯದಿಂದ ನಲಿಯುತ್ತಿರುವುದು ಹೊಳೆದು ಕಂಡಿತು.

***

ಓರ್ವ ಸಾಹಸದ ನಾವಿಕನು ತನ್ನ ಹಡಗಿನ ಪಡೆಯೊಡನೆ ಸಮುದ್ರಯಾತ್ರೆ ಕೈಗೊಳ್ಳುವನು. ಅವನು ಸಾಗರದಿಂದ ಆವೃತವಾದ ಈ ಧರಾಮಂಡಲವನ್ನು ಸುತ್ತಿ ಹೊಸದೇಶಗಳನ್ನು ಕಂಡು ಹಿಡಿಯುವೆನು ಎಂಬ ಉತ್ಸಾಹ ಉಲ್ಲಾಸದಿಂದ ಹೊರಡುವನು. ಬೀಸಿ ಬರುತ್ತಿರುವ ಅನುಕೂಲಗಳಿಗೆ ಅತಿಯಾಗಿ ಉಬ್ಬಿ ಆ ತೆಪ್ಪದ ಪಟಗೆದರಿಕೊಂಡು ಹಾರಾಡುವುದು. ಆ ಗಂಭೀರ ವಿಸ್ತಾರದ ಅಲೆಗಳಿಲ್ಲದ ನೀಲ ಜಲದಲ್ಲಿ ಹಡಗು ತೇಲುತ್ತ ಪಯಣ ಮಾಡಿ ಮುಂದುವರಿದು ದಿನ ದಿನಕ್ಕೆ ದೂರ ದೂರಕ್ಕೆ ಸಾಗುವುದು.

ಹಡಗಿನ ಚುಕ್ಕಾಣಿ ಹಿಡಿದವನು (ಕರ್ಣಧಾರ) ಪ್ರತಿದಿನ ಹಡಗಿನ ಧ್ವಜಸ್ತಂಭದ ತುದಿಗೆ ಏರಿ, ಹೊಸನಾಡು ಕಣ್ಣಿಗೆ ಬೀಳುವುದೆಂಬ ಹಾರೈಕೆಯಿಂದ ನೋಡುವನು. ದೃಷ್ಟಿ ಹರಿಸಿ ನೋಡಿ ಬಳಲುವನು. ಅವನು ಕೆಳಗಿಳಿದು ಬರಲು ನೌಕಾ ಪಡೆಯ ಜನರು ಅವನ ಸುತ್ತು ಮುತ್ತಿ 'ಏನಾದರೂ ಕಂಡಿತೆ?' ಎಂದು ಕೇಳುವರು. ಅವನು ಎಂದಿನಂತೆ 'ಮೇಲೆ ನೀಲಾಕಾಶ, ಕೆಳಗೆ ನೀಲಾಂಬುಧಿ, ನೆಲದ ಚಿಹ್ನೆ ಕಾಣುತ್ತಿಲ್ಲ' ಎಂದು ಹೇಳುವನು!

ಹೀಗೆ ದಿನಗಳು ಕಳೆದು, ಪಕ್ಷ ಪಕ್ಷಗಳು ಉರುಳಿ, ಮಾಸ ಮಾಸಗಳಾಗಿ ಹೋಗುತ್ತಿರಲು ಆಹಾರ ಸಾಮಗ್ರಿ ಕರಗಿ ಇಲ್ಲವಾಗುವ ಸ್ಥಿತಿಗೆ ಬರುವುದು. ಆಗ ಪಡೆಯವರು ಆತಂಕದಿಂದ ಬೇಸರಗೊಳ್ಳುವರು. ಬಳಲಿ ಸಾಯುತ್ತೇವೆ ಎಂಬ ಭಯದಿಂದ ಹಡಗಿನ ಒಡೆಯನ ಮೇಲೆ ಕೋಪಗೊಳ್ಳುವರು. ಹಾಗೂ ಅವನು ಹಿಂತಿರುಗಲು ಒಪ್ಪದಿರುವಾಗ ಕ್ರಾಂತಿಗೆ ಸಿದ್ಧರಾಗುವರು!

ಅದರಿಂದ ಭಯಗೊಂಡ ನೌಕೆಯ ಒಡೆಯನು ಭಗವಂತನನ್ನು ಬೇಡುತ್ತ, ಪರ್ವತದ ಸಾನುಗಳ ದಿಕ್ಕಿನೆಡೆ ನೋಡುತ್ತಿದ್ದನು. ಆಗ ತಕ್ಷಣ, ಅತಿ ದೂರದಲ್ಲಿ ಮಂಜು ಮಸುಕಾಗಿ, ಗಗನಾಂಬುಧಿಯ ತೀರದಲ್ಲಿ ಒಂದು ಭೂಭಾಗವು ಕಣ್ಣಿಗೆ ಕಾಣಿಸಿತು. ಅದು ಸ್ವರ್ಗದ ತುಟಿ ಮತ್ತು ಮರ್ತ್ಯದ ತುಟಿ ಚುಂಬಿಸುವ ಎಡೆಯಲ್ಲಿತ್ತು! ಅವನು ಆನಂದದಿಂದ ಮೈಮರೆತನು. ತನ್ನ ಪಡೆಯ ಜನರನ್ನು ಕೂಗಿ ಕರೆದನು. ಹರ್ಷದ ಕೃತಜ್ಞತೆಯಿಂದ ಕಣ್ಣೀರು ಹರಿಯುತ್ತಿರಲು ಮಾತಾಡದೆ ತಾನು ಕಂಡ ಕಾಣ್ಕೆಯನ್ನು ಎಲ್ಲರಿಗೂ ತೋರಿಸಿದನು!

ಹಡಗಿನ ಪಡೆಯವರು ಸಂತೋಷದಿಂದ ಹುಚ್ಚೆದ್ದು ಕಡಲ ಮೊರೆತದ ಜೊತೆಗೆ ತಮ್ಮ ಗೆಲುವಿನ ದನಿ ಕೂಡಿಸಿದರು. ಆಗ ಅವನು ನಾವೆಯನ್ನು ಬೇಗ ಬೇಗನೆ ತಾನು ನೋಡಿದ ಸಮುದ್ರದ ಕಾಡಿನ ಕಡೆಗೆ ನೂಕಿದನು!

ಅನಲ ಪರಿವೇಷ ವಳಯದೊಳ್
ಕಂಡುದರ್ಜುನನ ಯತಿಮೂರ್ತಿ

ಅದೇ ರೀತಿ ಚಿತ್ರಾಂಗದೆಯು ಆಶೆಯಿಂದ ಉಬ್ಬುತ್ತ ಆತಂಕದಿಂದ ಕಳವಳಿಸುತ್ತ ಕತ್ತಲೆಯ ರಕ್ತ ನಾಲಗೆಯಂತೆ ನರ್ತಿಸುವ ಉರಿಯ ಕಡೆಗೆ ನಡೆದಳು. ಹತ್ತಿರ ಹತ್ತಿರಕ್ಕೆ ಸಾಗುತ್ತಿರಲು ಅಗ್ನಿ ಸುತ್ತುವರಿದಿರುವ ವಲಯದಲ್ಲಿ ಅರ್ಜುನನ ಯತಿಮೂರ್ತಿ ಕಂಡಿತು. ಅದು ಮಾಗಿಯ ಮಂಜು ಕವಿದ ಪ್ರಾತಃಕಾಲದ ಸೂರ್ಯನ ಬಿಂಬದಂತಿದ್ದು ರಾತ್ರಿಯ ಕಗ್ಗತ್ತಲೆಯಿಂದ ಕಾಂತಿಹೀನವಾಗಿತ್ತು.

ಆ ಸಮಯದ ಆಸುಪಾಸಿನಲ್ಲಿ ಪೌರುಷದ ಕಠಿಣವಾದ ಧನುರ್ವಿದ್ಯೆಯನ್ನು ಹೊರತುಪಡಿಸಿ, ಸ್ತ್ರೀ ಸಹಜ ರತಿಕಲಾಭ್ಯಾಸ ಒಂದಿನಿತೂ ಇಲ್ಲದ ಚೈತ್ರವಾಹಿನಿಯು ಕಿರೀಟಿಯ ಬಳಿಗೆ ಬಂದಳು. ಅವಳು ಹೋದ ರೀತಿ ವರನೆಡೆಗೆ ವೈಯಾರದಿಂದ ಸಾಗುವ ಅಂಗನೆಯ ರೀತಿಯಲ್ಲಿರಲಿಲ್ಲ. ಅದು ವಿದ್ವೇಷಿಯನ್ನು ಸಂಹರಿಸುವ ದೃಢನಿಶ್ಚಯದ ಬಿಂಕದಿಂದ ಮುಂದುವರಿಯುವ ಶೂರನ ವಿಕ್ರಮ ಗಮನ ವಿನ್ಯಾಸವನ್ನು ಪ್ರದರ್ಶಿಸುವಂತಿತ್ತು. ಅವಳು ವೈರಿಯನ್ನು ಬಲದಿಂದ ಆಕ್ರಮಿಸಿ ಗೆಲ್ಲುವಂತೆ ಪುರುಷನ ಪ್ರೀತಿಯನ್ನು ಗೆಲ್ಲುವೆನೆಂಬ ಅಜ್ಞಾನದಿಂದಿದ್ದಳು.

ನಾರಿಯು ಹತ್ತಿರಕ್ಕೆ ಬರುತ್ತಿರಲು, ಯತಿವೀರನು ಒಣಗಿದ ಎಲೆಯ ಮರ್ಮರ ಧ್ವನಿಯನ್ನು ಕೇಳುತ್ತ ಕುತೂಹಲದಿಂದ ಕೊರಳೆತ್ತಿ ನೋಡಿದನು. 'ನಮಸ್ಕಾರ'ವೆಂದು ಹೇಳಿ ಬರುತ್ತಿದ್ದ ಸ್ತ್ರೀ ಆಕೃತಿ ಹತ್ತಿರದಲ್ಲಿ ಕಾಣಿಸಿತು. ಅದು ಸುಳ್ಳೊ, ಕಪಟವೊ, ನಿಜವೊ, ಮಾನವಿಯೊ, ಮೋಹಿನಿಯೊ, ರಕ್ಕಸಿಯೊ ಎನ್ನುವ ಸಂಶಯಕ್ಕೀಡಾಗಿ ಬೇಗನೆ ಎಚ್ಚರಿಕೆಯಿಂದ ಹೀಗೆ ಕೇಳಿದನು:

'ಎಲೆ ತರುಣಿ ನೀನು ಯಾರು? ಈ ರಾತ್ರಿ, ಈ ಘೋರವಾದ ಕಾಡಿನಲ್ಲಿ ರಾತ್ರಿಯಲ್ಲಿ ಸಂಚರಿಸುವ ರಾಕ್ಷಸಿಯಂತೆ ಅದೇಕೆ ಹೀಗೆ ಸುತ್ತುತ್ತಿರುವೆ? ಇದು ಕ್ರೂರಮೃಗಗಳು ಅಲೆದಾಡುವ ಹೊತ್ತು. ಹೆಣ್ಣಾಗಿ ನೀನು ಒಂದಿಷ್ಟು ಭಯಪಡದೆ ರಾತ್ರಿಯಲ್ಲೇಕೆ ಅಲೆದಾಡುತ್ತಿರುವೆ? ಮಾನವ ಸ್ತ್ರೀಯರಿಗೆ ಈ ರೀತಿಯ ಬಾಳೆಂಬುದು ಆಶ್ಚರ್ಯ! ಮತ್ತು ಸದ್ವಂಶದಲ್ಲಿ ಹುಟ್ಟಿದವರಿಗೆ ಇದು ಯೋಗ್ಯವಾದುದಲ್ಲ!'

ಅದಕ್ಕೆ ಪ್ರತ್ಯುತ್ತರವಾಗಿ ಅವಳು ಹೀಗೆ ಹೇಳಿದಳು:

ಪ್ರಣಯಾಗ್ನಿ ಎದೆಯನಾವರಿಸೆ ಕತ್ತಲೆಯಿಹುದೆ ಕಂಗಳಿಗೆ?

'ಯತಿ ವೀರನೆ, ನಿನ್ನಂತಹವರು ಇರಲು ಕಾಡು ತಾನೇ ನಾಡಿಗಿಂತಲೂ ಹೆಚ್ಚು ಸುಕ್ಷೇಮತರ ವಾಗುವುದು. ರಾತ್ರಿಯು ತಾನೇ ದಿನವಾಗುವುದು. ಭಯವೆಂಬುದು ತಾನೇ ಉಲ್ಲಾಸವಾಗುವುದು. ರಾತ್ರಿಯಲ್ಲಿ ಸಂಚರಿಸುವ ರಾಕ್ಷಸತ್ವವು ನಿರ್ಮಲ